**ಕರ್ನಾಟಕ ಸರ್ಕಾರ**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ**
**(ಆಡಳಿತ ಸುಧಾರಣೆ)**

ಸಂಖ್ಯೆ:ಸಿಆಸುಇ(ಆಸು) 47 ಆರ್‌ಟಿಐ 2023
ಇ-ಆಫೀಸ್ ನಂ: 1044042

ಕರ್ನಾಟಕ ಸರ್ಕಾರದ ಸಚಿವಾಲಯ
6ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 28.11.2023.

**https://dparar.karnataka.gov.in**

# ಅಧಿಸೂಚನೆ

**ವಿಷಯ: ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿಯಿರುವ 06 (ಆರು) (ಬೆಂಗಳೂರು 05 ಮತ್ತು ಬೆಳಗಾವಿ ಪೀಠ 01) ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗಳ ನೇಮಕಾತಿ ಬಗ್ಗೆ.**

******

ಮಾಹಿತಿ ಹಕ್ಕು ಅಧಿನಿಯಮ, 2005ರಡಿ ತನಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಲು ಮತ್ತು ನಿಗದಿಪಡಿಸಿರುವ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಕರ್ನಾಟಕ ಸರ್ಕಾರವು ಕರ್ನಾಟಕ ಮಾಹಿತಿ ಆಯೋಗವನ್ನು ರಚಿಸಿದೆ. ಕರ್ನಾಟಕ ಮಾಹಿತಿ ಆಯೋಗದ ಈಗಿನ ಸಂರಚನೆಯನ್ನು **www.kic.gov.in** ಇಲ್ಲಿ ನೋಡಬಹುದಾಗಿದೆ. ಕರ್ನಾಟಕ ಮಾಹಿತಿ ಆಯೋಗದಲ್ಲಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ರಾಜ್ಯ ಮಾಹಿತಿ ಆಯುಕ್ತರ ಅಧಿಕಾರ ಮತ್ತು ಕರ್ತವ್ಯಗಳು ಮಾಹಿತಿ ಹಕ್ಕು ಅಧಿನಿಯಮ, 2005ರ ಅಧ್ಯಾಯ V ರನ್ವಯ ಇರುತ್ತವೆ.

ಮಾಹಿತಿ ಹಕ್ಕು ಕಾಯ್ದೆ 2005 ರ ಅಧ್ಯಾಯ IV ರನ್ವಯ ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ನಿರ್ವಹಣೆ (ಮ್ಯಾನೇಜ್‌ಮೆಂಟ್), ಪತ್ರಿಕೋದ್ಯಮ, ಸಮೂಹ ಮಾಧ್ಯಮ ಅಥವಾ ಆಡಳಿತ (ಅಡ್ಮಿನಿಸ್ಟ್ರೇಷನ್ ಮತ್ತು ಗವರ್ನೆನ್ಸ್) ನಲ್ಲಿ ವಿಶಾಲ ತಿಳುವಳಿಕೆ ಮತ್ತು ಅನುಭವ ಹೊಂದಿರುವ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳನ್ನು ರಾಜ್ಯ ಮಾಹಿತಿ ಆಯುಕ್ತರನ್ನಾಗಿ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ಮಾಹಿತಿ ಆಯೋಗದಲ್ಲಿ ಪ್ರಸ್ತುತ ಒಟ್ಟು 06 (ಆರು) ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗಳು ಖಾಲಿಯಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದೆ.

1. ಬೆಂಗಳೂರು - 05 (ಐದು)
2. ಬೆಳಗಾವಿ - 01 (ಒಂದು)

ಈ ಹಿಂದೆ ಬೆಳಗಾವಿ ಪೀಠದ ರಾಜ್ಯ ಮಾಹಿತಿ ಆಯುಕ್ತರ ಹುದ್ದೆಯ ನೇಮಕಾತಿಗಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ(ಆಸು) 25 ಆರ್ ಟಿಐ 2022 ದಿನಾಂಕ: 18.07.2022 ರ ಜಾಹೀರಾತು ಪ್ರಕಟಣೆ ಹೊರಡಿಸಲಾಗಿದ್ದು, ಈ ಜಾಹೀರಾತು ಪ್ರಕಟಣೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಮಾಹಿತಿ ಆಯುಕ್ತರು ಸಂಸತ್ ಸದಸ್ಯರಾಗಲೀ ಅಥವಾ ಯಾವುದೇ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಮಂಡಲದ ಸದಸ್ಯರಾಗಿರತಕ್ಕದ್ದಲ್ಲ ಅಥವಾ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಪರ್ಕ ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರ ವ್ಯವಹಾರವನ್ನಾಗಲೀ ಅಥವಾ ಯಾವುದೇ ವೃತ್ತಿಯನ್ನು ಮಾಡತಕ್ಕದ್ದಲ್ಲ.

ರಾಜ್ಯ ಮಾಹಿತಿ ಆಯುಕ್ತರ ಪದಾವಧಿ ಮತ್ತು ಸೇವಾ ಷರತ್ತುಗಳು ಮಾಹಿತಿ ಹಕ್ಕು (ಕೇಂದ್ರ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರ ಹಾಗೂ ಮಾಹಿತಿ ಆಯುಕ್ತರ, ರಾಜ್ಯ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ರಾಜ್ಯ ಮಾಹಿತಿ ಆಯುಕ್ತರುಗಳ ಪದಾವಧಿ, ವೇತನಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತಗಳು ಹಾಗೂ ನಿಬಂಧನೆಗಳು ) ನಿಯಮಗಳು, 2019 ಅನ್ನು ಓದಿಕೊಂಡು ಮಾಹಿತಿ ಹಕ್ಕು ಅಧಿನಿಯಮ 2005, ರ ಪ್ರಕರಣ 16 ರಡಿಯಲ್ಲಿ ಹಾಗೂ ಸದರಿ ಅಧಿನಿಯಮದ ಅಡಿಯಲ್ಲಿ ಕಾಲಕಾಲಕ್ಕೆ ಹೊರಡಿಸಲಾದ ಯಾವುದೇ ಅಧಿಸೂಚನೆಗಳು, ನಿಯಮಗಳು ಮತ್ತು ತಿದ್ದುಪಡಿಗಳ ಅಡಿಯಲ್ಲಿ ಉಪಬಂಧಿಸಿದಂತೆ ಇರತಕ್ಕದ್ದು. **ಅಭ್ಯರ್ಥಿಗಳು ಕರ್ನಾಟಕದ ಯಾವುದೇ ಪೀಠದಲ್ಲಿ ಸೇವೆ ಸಲ್ಲಿಸುವುದಕ್ಕೆ ಸಿದ್ಧರಿರಬೇಕು.** ಆಯ್ಕೆಗೊಂಡ ಅಭ್ಯರ್ಥಿಗಳು ಘನತೆವೆತ್ತ ರಾಜ್ಯಪಾಲರು ನಿಗದಿಪಡಿಸಿದ ದಿನಾಂಕದಂದು ಪ್ರಮಾಣವಚನ ಸ್ವೀಕರಿಸಲು ಸಿದ್ಧರಿರಬೇಕು.

ರಾಜ್ಯ ಮಾಹಿತಿ ಆಯುಕ್ತರಾಗಿ ನೇಮಕಾತಿ ಹೊಂದಲು ಮೇಲಿನ ಮಾನದಂಡಗಳನ್ನು ಪೂರೈಸಿರುವವರು ಮತ್ತು ನೇಮಕಗೊಳ್ಳಲು ಆಸಕ್ತರಾದವರು ತಮ್ಮ ವ್ಯಕ್ತಿಗತ ವಿವರಗಳನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ನಮೂನೆಯಲ್ಲಿ ಅಂಚೆ ಮೂಲಕ/ ಇ-ಮೇಲ್- dparar.rti.so@gmail.com, ಅಥವಾ ಖುದ್ದಾಗಿ **ಕೊಠಡಿ ಸಂಖ್ಯೆ: 614, ಸ್ವೀಮರ ಮತ್ತು ರವಾನೆ ಶಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) 6ನೇ ಮಹಡಿ, 1ನೇ ಗೇಟ್, ಬಹುಮಹಡಿಗಳ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001 ಇಲ್ಲಿ ದಿನಾಂಕ:-30.12.2023ರ ಸಂಜೆ 5.30 ಗಂಟೆಯೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.**

ರಾಜ್ಯ/ಕೇಂದ್ರ ಸರ್ಕಾರದಲ್ಲಿ ಅಥವಾ ಯಾವುದೇ ಇತರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರು ತಮ್ಮ ವಿವರಗಳನ್ನು ಸಮುಚಿತ ಮಾರ್ಗದ ಮೂಲಕ ಸಲ್ಲಿಸಬಹುದಾಗಿದೆ.

Janaki YR 28/11/23

(ಜಾನಕಿ ವೈ .ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ & ಆಡಳಿತ ಸುಧಾರಣಾಇಲಾಖೆ(ಆಸು)
( ತರಬೇತಿ & ಮಾಹಿತಿ ಹಕ್ಕು)
ದೂ. ಸಂಖ್ಯೆ: 080-2203 2907, 2203 2655

**ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿಯಿರುವ 06 (ಆರು) (ಬೆಂಗಳೂರು - 05 ಮತ್ತು ಬೆಳಗಾವಿ ಪೀಠ - 01) ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗಳ ನೇಮಕಾತಿ ಬಗ್ಗೆ.**

**ಅರ್ಜಿ ನಮೂನೆ**

ಸ್ವಯಂ ದೃಢೀಕರಿಸಿದ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸುವುದು.

1. ಹೆಸರು :
2. ಹುಟ್ಟಿದ ದಿನಾಂಕ :
3. ಲಿಂಗ (ಸ್ತ್ರೀ/ಪುರುಷ) :
4. ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರೇ :
5. ಅಂಚೆ ವಿಳಾಸ :
6. ಕನ್ನಡ ಭಾಷೆಯ ನೈಪುಣ್ಯತೆ :
   (ಓದಲು, ಬರೆಯಲು ಮತ್ತು ಮಾತನಾಡಲು)

7. ದೂರವಾಣಿ ಸಂಖ್ಯೆ
   ಮೊಬೈಲ್ ಸಂಖ್ಯೆ :

8. ಇ-ಮೇಲ್ ವಿಳಾಸ :
9. ಶೈಕ್ಷಣಿಕ ಅರ್ಹತೆ :
10. ಪರಿಣಿತಿ ಹೊಂದಿರುವ ಕ್ಷೇತ್ರ :
11. ಪ್ರಸ್ತುತ ಉದ್ಯೋಗ :
12. ಸಾಧನೆಗಳು/ಉದ್ಯೋಗದ
    ಅನುಭವ (ಒಂದು ಪುಟಕ್ಕೆ ಮೀರದಂತೆ) :

ಸ್ಥಳ:
ದಿನಾಂಕ :

ಅರ್ಜಿದಾರರ ಸಹಿ:
ಅರ್ಜಿದಾರರ ಹೆಸರು: